# ಶಿಕ್ಷಣ ಸಂಸ್ಥೆಗಳ ಗಟ್ಟಿಧ್ವನಿಯಾದ ಹೊರಟ್ಟಿಯವರ ಸಾರ್ಥಕ ಸೇವೆಯನ್ನು ಸಮಾಜ ಎಂದೂ ಮರೆಯದು



ಮುಂಡರಗಿ : ಖಾಸಗಿ ಹಾಗೂ ಸರಕಾರಿ ಶಿಕ್ಷಣ ಸಂಸ್ಥೆಗಳ ಹಿತ ಕಾಯುವಲ್ಲಿ ಕಳೆದ 45 ವರ್ಷಗಳಿಂದ ಹತ್ತು ಹಲವು ಹೋರಾಟಗಳನ್ನು ಮಾಡುವ ಮೂಲಕ ಶಿಕ್ಷಣ ಸಂಸ್ಥೆಯವರು ನೆಮ್ಮದಿಯಿಂದ ಕೆಲಸ ಮಾಡುವಂತಹ ವಾತಾವರಣವನ್ನು ಕಲ್ಪಿಸಿಕೊಟ್ಟವರು ಹಾಗೂ ಶಿಕ್ಷಕರ ವಲಯದ ಅತ್ಯಂತ ನಂಬುಗೆಯ ಏಕೈಕ ನಾಯಕರೆನಿಸಿಕೊಂಡವರು ಸಭಾಪತಿ ಬಸವರಾಜ ಹೊರಟ್ಟಿಯವರು. ಎಂದು ಮುಂಡರಗಿಯ ಡಾ.ಅನ್ನದಾನೀಶ್ವರ ಸ್ವಾಮಿಗಳು ಹೇಳಿದರು.

ಅವರು ಗೌರವಾನ್ವಿತ ಸಭಾಪತಿಗಳಾದ ಬಸವರಾಜ ಹೊರಟ್ಟಿಯವರ ಸ್ಥಳೀಯ ಶಾಸಕರ ಪ್ರದೇಶಾಭಿವೃದ್ಧಿ ಯೋಜನೆಯ ಅಡಿಯಲ್ಲಿ ನಿರ್ಮಾಣಗೊಂಡ ಶುದ್ಧ ಕುಡಿಯುವ ನೀರಿನ ಘಟಕದ ಲೋಕಾರ್ಪಣೆ ಕಾರ್ಯಕ್ರಮದ ಸಾನಿಧ್ಯವಹಿಸಿ ಮಾತನಾಡಿದ ಅವರು, ಖಾಸಗಿ ಶಾಲೆಯಲ್ಲಿ 5 ಲಕ್ಷ ರೂಪಾಯಿ ವೆಚ್ಚ ಶುದ್ಧ ನೀರು ಘಟಕ ನಿರ್ಮಾಣಕ್ಕೆ ಹೊರಟ್ಟಿಯವರ ಸಹಾಯ ಮಾಡುವ ಮೂಲಕ ವಿದ್ಯಾರ್ಥಿಗಳ ಆರೋಗ್ಯದತ್ತ ಗಮನಹರಿಸಿದ್ದು ವಿಶೇಷ ಹೀಗಾಗಿ ಅವರ ಕಳಕಳಿಯನ್ನು, ಕಾಳಜಿಯನ್ನು ಅತ್ಯಂತ ಪ್ರೀತಿಯಿಂದ ಗೌರವಿಸುವುದಾಗಿ ಹೇಳಿದರು. ನಮ್ಮ ಸಂಸ್ಥೆಗೆ ಎಲ್ಲ ರೀತಿಯ ಸಹಾಯ ಸಹಕಾರ ಮಾಡುವುದರ ಜೊತೆಗೆ ನಮ್ಮ ಶಾಲಾ ಕಾಲೇಜುಗಳ ಹಿತವನ್ನು ಕಾಯುತ್ತಾ ಬಂದಿದ್ದಾರೆ. ಹೀಗಾಗಿ ಅವರನ್ನು ಶ್ರೀಮಠ ವಿಶೇಷವಾಗಿ ಕಾಣುವುದರಜೊತೆಗೆ ಸದಾ ಶ್ರೀರಕ್ಷೆ ನೀಡುತ್ತಾ ಬಂದಿದೆ ಎಂದು ಹೇಳಿ ಆಶೀರ್ವಚನ ನೀಡಿದರು.

ಸಭಾಪತಿ ಬಸವರಾಜ ಹೊರಟ್ಟಿಯವರು ಶುದ್ಧ ಕುಡಿಯುವ ನೀರು ಘಟಕ ಲೋಕಾರ್ಪಣೆ ಮಾಡಿ ಮಾತನಾಡಿದ ಅವರು ನಮಗೆ ಬರುವ ಎಲ್ಲ ಅನುದಾನದ ಬಹುಪಾಲನ್ನು ಶಾಲಾ ಕಾಲೇಜು ಅಭಿವೃದ್ಧಿಗೆ ನೀಡುತ್ತಾ ಬಂದಿದ್ದೇನೆ. ಗದಗ ಶಹರದ ಅಂಚಿನಲ್ಲಿರುವ ನರಸಾಪೂರದ ಶಾಲೆಗೆ ಶುದ್ಧ ನೀರು ಘಟಕ ಬೇಕಾಗಿತ್ತು ಈ ಭಾಗದ ವಿದ್ಯಾರ್ಥಿಗಳಿಗೆ ಉತ್ತಮ ನೀರನ್ನು ಸೇವಿಸುವ ಮೂಲಕ ಆರೋಗ್ಯ ವೃದ್ಧಿಯಾಗಲು ಈ ಘಟಕ ನೆರವಾಗಲಿದೆ. ವಿಶೇಷವಾಗಿ ಖಾಸಗಿ ಶಾಲೆಗಳು ಇಂದು ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿವೆ. ಈ ಸಮಸ್ಯೆಗಳಿಗೆ ಪರಿಹಾರ ಉತ್ತಮ ಶಿಕ್ಷಣ ನೀಡುವುದು. ಮಕ್ಕಳ ಬಗ್ಗೆ ವಿಶೇಷ ಕಾಳಜಿ ವಹಿಸುವುದು. ಶಾಲಾ ವಾತಾವರಣವನ್ನು ಉತ್ಕೃಷ್ಟಗೊಳಿಸಿದಾಗ ಮಾತ್ರ ಸಾಧ್ಯ. ಈ ನಿಟ್ಟಿನತ್ತ ಶಿಕ್ಷಣ ಸಂಸ್ಥೆಯವರು, ಶಿಕ್ಷಕರು ಹೆಚ್ಚು ಗಮನ ಹರಿಸಬೇಕಿದೆ ಎಂದು ಹೇಳಿದರು.

ಅಪ್ಪ ಸೇವಾ ಟ್ರಸ್ಟ ಸಂಚಾಲಕರಾದ ಡಾ.ಬಸವರಾಜ ಧಾರವಾಡಮಾತನಾಡಿ ಹೊರಟ್ಟಿಯವರು ತಮ್ಮ ಅನುದಾನವನ್ನು ಮಠ ಮತ್ತು ಮಠೀಯ ರಾಜಕಾರಣಕ್ಕೆ ಬಳಸಿಕೊಳ್ಳದೇ ಎಲ್ಲ ಸಮುದಾಯಗಳಿಗೆ ಸಮಾನವಾಗಿ ಹಂಚಿ ಶಿಕ್ಷಣ ಸಂಸ್ಥೆಗಳ ಅಭಿವೃದ್ಧಿಗೂ ಕಾರಣೀಕರ್ತರಾಗಿದ್ದಾರೆ. ಗದಗ ಜಿಲ್ಲೆಗೆ ಅವರು ನೀಡಿದ ಅನುದಾನ ಸದ್ಬಳಕೆ ಆಗುವುದರ ಜೊತೆಗೆ ಸಾರ್ಥಕ ಸೇವೆಗೆ ಸಹಾಯವಾಗಿದೆ. ಹೀಗಾಗಿ ಗದಗ ಜಿಲ್ಲೆಯ ಜನತೆಯ ಪರವಾಗಿ ಹೊರಟ್ಟಿಯವರನ್ನು ಅಭಿನಂದಿಸುವುದಾಗಿ ಹೇಳಿದರು.

ಈ ಸಂದರ್ಭದಲ್ಲಿ ವೀರೇಶ್ವರ ಸ್ವಾಮಿಗಳು, ಡಾ.ಪಿ.ಜಿ.ಪವಾರ, ಡಿ.ಡಿ.ಪಿ.ಐ. ಜಿ.ಎಂ.ಬಸವಲಿಂಗಪ್ಪ, ಜೆ.ಎಲ್.ಚಾರಾಟಕ್ಕೆ, ಬಿ.ಬಿ.ನಡುವಿನಮನಿ, ಅನ್ನದಾನಿ ಹಿರೇಮಠ, ಶ್ರೀಮತಿ ಮಹಾದೇವಿ ಮೇಲ್ಗಿರಿ, ಎಸ್.ಎಂ.ಅಗಡಿ, ಲಕ್ಷ್ಮೀ ಕಾಕಿ, ಸಿದ್ದಲಿಂಗಪ್ಪ ಪದೇಸೂರ, ಜಂಬಣ್ಣ ಕಲಬುರ್ಗಿ, ಮುತ್ತನಗೌಡ ಸಣ್ಣಗೌಡ್ರ, ಶಿವಾನಂದ ಕರಿಗೌಡ್ರ, ಶ್ರೀಮತಿ ನಿರ್ಮಲಾ ಕರಿಗೌಡ್ರ, ನಿಂಗಪ್ಪ ಮಣ್ಣೂರ ಉಪಸ್ಥಿತರಿದ್ದರು. ಮುಖ್ಯೋಪಾಧ್ಯಾಯರಾದ ಎಂ.ಎಚ್.ಮೊಹಾರ ಪ್ರಾಸ್ತಾವಿಕವಾಗಿ ಮಾತನಾಡಿ ಸರ್ವರನ್ನೂ ಸ್ವಾಗತಿಸಿದರು. ಹೊಳಗುಂದಿ ಗುರುಗಳು ಕಾರ್ಯಕ್ರಮ ನಿರೂಪಿಸಿ ವಂದಿಸಿದರು.

# ಹೊರಟ್ಟಿ ಸಾರ್ಥಕ ಸೇವೆ ಸಮಾಜ ಮರೆಯದು

**ಗದಗ:** ಖಾಸಗಿ ಹಾಗೂ ಸರ್ಕಾರಿ ಶಿಕ್ಷಣ ಸಂಸ್ಥೆಗಳ ಹಿತಕಾಯುವಲ್ಲಿ ಕಳೆದ 45 ವರ್ಷಗಳಿಂದ ಹತ್ತು ಹಲವು ಹೋರಾಟಗಳ ಮೂಲಕ ಶಿಕ್ಷಣ ಸಂಸ್ಥೆಯವರು ನೆಮ್ಮದಿಯಿಂದ ಕೆಲಸ ಮಾಡುವಂತಹ ವಾತಾವರಣ ಕಲ್ಪಿಸಿ, ಶಿಕ್ಷಕರ ವಲಯದಲ್ಲಿ ಗಂಟಾಗೆಯ ನಾಯಕರೆನಿಸಿಕೊಂಡ ಹೆಗ್ಗಳಿಕೆಗೆ ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಪಾತ್ರರಾಗಿದ್ದಾರೆ ಎಂದು ಮುಂಡರಗಿ ಡಾ.ಅನ್ನದಾನೀಶ್ವರ ಸ್ವಾಮಿಗಳು ಬಣ್ಣಿಸಿದರು.

ತಾಲೂಕಿನ ಸರ್ಜಾಪುರ ಗ್ರಾಮದಲ್ಲಿ ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅವರ ಸ್ಥಳೀಯ ಶಾಸಕರ ಪ್ರದೇಶಾಭಿವೃದ್ಧಿ ಯೋಜನೆಯಡಿ ನಿರ್ಮಾಣಗೊಂಡ ಶುದ್ಧ ಕುಡಿಯುವ ನೀರಿನ ಘಟಕದ ಲೋಕಾರ್ಪಣೆ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಮಾತನಾಡಿದ ಶ್ರೀಗಳು, ಖಾಸಗಿ ಶಾಲೆಯಲ್ಲಿ ಶುದ್ಧ ನೀರು ಘಟಕ ನಿರ್ಮಾಣಕ್ಕೆ ಹೊರಟ್ಟಿಯವರ 5 ಲಕ್ಷ ರೂ. ವೆಚ್ಚದ ಸಹಾಯ ಮಾಡುವ ಮೂಲಕ ವಿದ್ಯಾರ್ಥಿಗಳ ಆರೋಗ್ಯದತ್ತ ಗಮನಹರಿಸಿದ್ದು ವಿಶೇಷ. ಅವರ ಕಳಕಳಿ, ಕಾಳಜಿ ಪ್ರೀತಿಯಿಂದ ಗೌರವಿಸಲಾಗುವುದು. ನಮ್ಮ ಸಂಸ್ಥೆಗೆ ಎಲ್ಲ ರೀತಿಯ ಸಹಾಯ ಸಹಕಾರದ ಜೊತೆಗೆ ಶಾಲಾ, ಕಾಲೇಜುಗಳ ಹಿತಕಾಯುತ್ತಾ ಬಂದಿದ್ದಾರೆ. ಅವರನ್ನು ಶ್ರೀಮಠ ವಿಶೇಷವಾಗಿ ಕಾಣುವುದರ ಜೊತೆಗೆ ಸದಾ ಶ್ರೀರಕ್ಷೆ ನೀಡುತ್ತಾ ಬಂದಿದೆ ಎಂದರು.

ಸಭಾಪತಿ ಬಸವರಾಜ ಹೊರಟ್ಟಿ ಮಾತನಾಡಿ, ತಮಗೆ ಸರ್ಕಾರದಿಂದ ಸ್ಥಳೀಯ ಪ್ರದೇಶಾಭಿವೃದ್ಧಿ ನಿಧಿಯಲ್ಲಿ ದೊರೆಯುವ ಅನುದಾನದ ಬಹುಪಾಲನ್ನು ಶಾಲಾ, ಕಾಲೇಜು ಅಭಿವೃದ್ಧಿಗೆ ನೀಡುತ್ತೇನೆ. ಗದಗ ನಗರದ ಅಂಚಿನಲ್ಲಿರುವ ಸರ್ಜಾಪುರದ ಶಾಲೆಗೆ ಶುದ್ಧ ನೀರು ಘಟಕವು ಈ ಭಾಗದ ವಿದ್ಯಾರ್ಥಿಗಳಿಗೆ ಉತ್ತಮ ನೀರು ಕುಡಿಯುವ ಮೂಲಕ ಆರೋಗ್ಯ ವೃದ್ಧಿಗೆ ನೆರವಾಗಲಿದೆ. ಖಾಸಗಿ ಶಾಲೆಗಳು ಇಂದು ಹಲವಾರು ಸಮಸ್ಯೆ ಎದುರಿಸುತ್ತಿವೆ. ಈ ಸಮಸ್ಯೆಗಳಿಗೆ ಪರಿಹಾರ ಉತ್ತಮ ಶಿಕ್ಷಣ, ಮಕ್ಕಳ ಬಗ್ಗೆ ವಿಶೇಷ ಕಾಳಜಿ, ಶಾಲಾ ವಾತಾವರಣ ಉತ್ತಮಪಡಿಸಿಕೊಳ್ಳುವುದಾಗ ಮಾತ್ರ ಸಾಧ್ಯ. ಈ ನಿಟ್ಟಿನತ್ತ ಶಿಕ್ಷಣ ಸಂಸ್ಥೆಗಳು, ಶಿಕ್ಷಕರು ಹೆಚ್ಚಿನ ಗಮನ ಹರಿಸಬೇಕಿದೆ ಎಂದರು.

ಅನ್ನ ಸೇವಾ ಟ್ರಸ್ಟ್ ಸಂಚಾಲಕ ಡಾ.ಬಸವರಾಜ ಧಾರವಾಡ ಮಾತನಾಡಿ, ಹೊರಟ್ಟಿಯವರು ತಮ್ಮ ಅನುದಾನ ಮಠ ಮತ್ತು ಮಠದ ಸಂಸ್ಥೆಗಳಿಗೆ ಬಳಸಿಕೊಳ್ಳದೆ ಎಲ್ಲ ಸಮುದಾಯಗಳಿಗೆ ಸಮಾನವಾಗಿ ಹಂಚಿ ಶಿಕ್ಷಣ ಸಂಸ್ಥೆಗಳ ಅಭಿವೃದ್ಧಿಗೂ ಕಾರಣೀಕರ್ತರಾಗಿದ್ದಾರೆ. ಗದಗ ಜಿಲ್ಲೆಗೆ ಅವರು ನೀಡಿದ ಅನುದಾನ ಸದ್ಬಳಕೆ ಜೊತೆಗೆ ಸಾರ್ಥಕ ಸೇವೆಗೆ ಸಾಕ್ಷಿಯಾಗಿದೆ. ಹೀಗಾಗಿ ಗದಗ ಜಿಲ್ಲೆಯ ಜನತೆ ಪರವಾಗಿ ಹೊರಟ್ಟಿ ಅವರನ್ನು ಅಭಿನಂದಿಸುವುದಾಗಿ ಹೇಳಿದರು.

ಈ ವೇಳೆ ವೀರೇಶ್ವರ ಸ್ವಾಮಿಗಳು, ಡಾ.ಬಿ.ಜಿ.ಜವಳಿ, ಡಿಡಿಪಿಐ ಜಿ.ಎಂ.ಬಸವಲಿಂಗಪ್ಪ, ಜೆ.ಎಲ್.ಬಾರಾಟಕ್ಕೆ, ವಿ.ವಿ.ನಡುವಿನಮನಿ, ಅನ್ನದಾನಿ ಹಿರೇಮಠ, ಮಹಾದೇವಿ ಮೇಲ್ಪತಿ, ಎಸ್.ಎಂ.ಅಗಡಿ, ಲಕ್ಷ್ಮೀ ಶಾ, ಸಿದ್ಧಲಿಂಗಪ್ಪ ಪಟ್ಟಣಶೆಟ್ಟಿ, ಶಂಭಣ್ಣ ಕಟಗಿ, ಮುತ್ತಣ್ಣಗೌಡ ಪಾಟೀಲ, ವಿಜಯಾನಂದ ಕಂಗೊಳ್ಳ, ನಿರ್ಮಲಾ ಕಂಗೊಳ್ಳ, ನಿಂಗಪ್ಪ ಹುಣಸಿಕಟ್ಟಿ, ಮುಖ್ಯೋಪಾಧ್ಯಾಯ ಎಂ.ಎಸ್.ಮೇಟಿ, ಹೊಳಗುಂದಿ ಗುರುಗಳು ಇತರರು ಇದ್ದರು.



ಸರ್ಜಾಪುರ ಗ್ರಾಮದಲ್ಲಿರುವ ಮುಂಡರಗಿ ಅನ್ನದಾನೀಶ್ವರ ಪ್ರೌಢಶಾಲೆಯಲ್ಲಿ ಶುದ್ಧ ಕುಡಿಯುವ ನೀರಿನ ಘಟಕವನ್ನು ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಲೋಕಾರ್ಪಣೆಗೊಳಿಸಿದರು.

# ಸರಕಾರಿ ಶಾಲಾ ಹಂತದಲ್ಲಿಯೇ ಮೊಟ್ಟ ಮೊದಲು ನಿರ್ಮಾಣಗೊಂಡ ರಂಗಮಂದಿರ ಸದುಪಯೋಗವಾಗಲಿ : ಸಭಾಪತಿ ಬಸವರಾಜ ಹೊರಟ್ಟಿ




ಗದಗ, 19. ಸರಕಾರಿ ಪ್ರೌಢಶಾಲಾ ಹಂತದಲ್ಲಿ ಮೊಟ್ಟಮೊದಲ ನಿರ್ಮಾಣಗೊಂಡ ರಂಗಮಂದಿರ ಶಾಲಾ ವಾತಾವರಣದ ಕಳೆ ಕಟ್ಟುವುದರ ಜೊತೆಗೆ ವಿದ್ಯಾರ್ಥಿಗಳ ಸರ್ವಾಂಗೀಣ ಅಭಿವೃದ್ಧಿಗೆ ಒಂದು ವೇದಿಕೆ ಆಗಲಿ ಎಂದು ಕರ್ನಾಟಕ ವಿಧಾನ ಪರಿಷತ್ತಿನ ಸಭಾಪತಿ ಬಸವರಾಜ ಹೊರಟ್ಟಿಯವರು ಹೇಳಿದರು.

ಅವರು ತಮ್ಮ ಶಾಸಕರ ಪ್ರದೇಶಾಭಿವೃದ್ಧಿ ಅಡಿಯಲ್ಲಿ ನಿರ್ಮಾಣಗೊಂಡ ರಂಗಮಂದಿರ ಹಾಗೂ ವಿವಿಧ ಅಭಿವೃದ್ಧಿ ಕಾಮಗಾರಿಗಳ ಉದ್ಘಾಟನೆ ಮಾಡಿ ಮಾತನಾಡಿದ ಅವರು ಸರಕಾರಿ ಪ್ರೌಢಶಾಲಾ ಹಂತದಲ್ಲಿ ರಂಗಮಂದಿರ ನಿರ್ಮಾಣ ಮಾಡಿದ್ದು ಒಂದು ಹೊಸ ಆಲೋಚನೆ. ಈ ರಂಗಮಂದಿರದ ಮೂಲಕ ದೈನಂದಿನ ಪ್ರಾರ್ಥನೆ. ಬಿಸಿಯೂಟ ಸವಿಯಲು ನೆರಳು ಹಾಗೂ ವಿವಿಧ ಸಾಂಸ್ಕೃತಿಕ ಚಟುವಟಿಕೆಗಳ ಪ್ರದರ್ಶನಕ್ಕೆ ಒಂದು ಉತ್ತಮವೇದಿಕೆ ಆಗುವಲ್ಲಿ ಯಾವುದೇ ಸಂಶಯವಿಲ್ಲ. ಈ ರಂಗಮಂದಿರದ ಮೂಲಕ ಶಾಲಾ ವಾತಾವರಣದ ಕಳೆಯೇ ಬದಲಾಗಿದೆ. ಇದು ಸರ್ಕಾರಿ ಶಾಲೆಯಾ ಎನ್ನುವಂತಹ ವಾತಾವರಣ ಮೂಡಿದ್ದು ಖುಷಿ ತಂದಿದೆ. ನಾ ನೀಡಿದ ಅನುದಾನ ಸದ್ಬಳಕೆ ಆಗುವಮೂಲಕ ಸಾರ್ಥಕತೆ-ಯಾಗಿದೆ. ಇದರ ಸದುಪಯೋಗ ಹೆಚ್ಚೆಚ್ಚು ಆಗಲೆಂದು ಆಶಯ ವ್ಯಕ್ತಪಡಿಸಿದರು. ಜೊತೆಗೆ ಈ ಶಾಲೆಯ ಸರ್ವಾಂಗೀಣ ಅಭಿವೃದ್ಧಿಗೆ ಎಲ್ಲ ರೀತಿಯ ಸಹಕಾರವನ್ನು ಮುಂದೆಯೂ ಮಾಡುವುದಾಗಿ ಹೇಳಿದರು.

ಅದ್ಯಕ್ಷತೆ ವಹಿಸಿದ್ದ ಶಾಸಕ ಎಚ್.ಕೆ.ಪಾಟೀಲರು ಅವ್ವ ಸೇವಾ ಟ್ರಸ್ಟ ನಿರ್ದೇಶಕರಾದ ಶ್ರೀಮತಿ ಹೇಮಲತಾ ಬಸವರಾಜ ಹೊರಟ್ಟಿ ಇವರ ಸಹಕಾರದಿಂದ ನಿರ್ಮಾಣಗೊಳ್ಳುವ ಗಣಿತ ಪ್ರಯೋಗಾಲಯ ಹಾಗೂ ಸಂಶೋಧನಾ ಕೇಂದ್ರದ ಕರಪತ್ರ ಬಿಡುಗಡೆಮಾಡಿ ಮಾತನಾಡಿದ ಅವರು ಶ್ರೀಮತಿ ಹೇಮಲತಾ ಬಸವರಾಜ ಹೊರಟ್ಟಿ ಯವರು ಕೂಡಾ ಬಸವರಾಜ ಹೊರಟ್ಟಿಯವರ ಎಲ್ಲ ಬೆಳವಣಿಗೆಗೆ ಕಾರಣೀಕರ್ತರಾಗಿದ್ದಾರೆ. ಜೊತೆಗೆ ಸಮಾಜಮುಖಿ ಸೇವೆ ಮಾಡುವ ಮೂಲಕ ವಿದ್ಯಾರ್ಥಿಗಳಿಗೆ ಸದುಪಯೋಗವಾಗುವ ಈ ಸಂಶೋಧನಾ ಕೇಂದ್ರ ರಾಜ್ಯದಲ್ಲಿಯೇ ಮಾದರಿಯಾಗಲಿ ಎಂದು ಶುಭ ಹಾರೈಸಿದರು. ಅಲ್ಲದೇ ಶಾಲಾ ಆವರಣದಲ್ಲಿ ಪಿಂಕ್ ಶೌಚಾಲಯ ನಿರ್ಮಾಣಕ್ಕೆ ಎಲ್ಲ ರೀತಿಯ ಸಹಕಾರ ನೀಡುವುದಾಗಿ ಹೇಳಿದರು. ಬಸವರಾಜ ಹೊರಟ್ಟಿಯವರ ನಾಲ್ಕು ದಶಕಗಳ ಸಾಮಾಜಿಕ ಸೇವೆಗಳ ಕುರಿತು ಸಾರ್ವಜನಿಕ ಬದುಕಿನ ಕುರಿತು ಅರ್ಥಪೂರ್ಣವಾಗಿ ಮಾತನಾಡಿ ಹೊರಟ್ಟಿಯವರ ಸೇವೆ ಸಾರ್ಥಕವಾಗಿದೆ. ವಿಶೇಷವಾಗಿ ಗದಗ ಜಿಲ್ಲೆಗೆ ಒಂದು ರಂಗಮಂದಿರವನ್ನು ಕೊಡುವ ಮೂಲಕ ಗದುಗಿನ ಕೀರ್ತಿಯನ್ನು ಹೆಚ್ಚಿಸಿದ್ದಾರೆ. ಆದಕ್ಕಾಗಿ ಅವರಿಗೂ ವಿಶೇಷ ಅಭಿನಂದನೆ ಸಲ್ಲಿಸುವುದಾಗಿ ಹೇಳಿದರು.

ತೋಂಟದಾರ್ಯ ಶಾಖಾ ಮಠ ಮುಂಡರಗಿಯ ನಿಜಗುಣಾನಂದ ಸ್ವಾಮಿಗಳು ಸಾನಿಧ್ಯವಹಿಸಿ ಆಶೀರ್ವಚನ ನೀಡಿ ಮಾತನಾಡಿ ಹೊರಟ್ಟಿಯವರು ಒಬ್ಬ ಪ್ರಬುದ್ಧ ಮುತ್ಸದ್ಧಿ, ಜನಸೇವಕ, ಅತ್ಯಂತ ವಿಶ್ವಾಸಾರ್ಹ ನಾಯಕರಾಗಿದ್ದರಿಂದಲೇ ಕಳೆದ 45 ವರ್ಷಗಳಿಂದ ಸಾರ್ವಜನಿಕ ಬದುಕಿನಲ್ಲಿ ಕ್ರಿಯಾಶೀಲ ವ್ಯಕ್ತಿಯಾಗಿರುವುದಕ್ಕೆ ಸಾಧ್ಯವಾಗಿದೆ. ಅವರ ತಾಳ್ಮೆ ಸ್ಪಂದನೆ ಸಹಕಾರ ಮನೋಭಾವದಿಂದ ನಾಡಿನ ಸಮಸ್ತ ಶಿಕ್ಷಕರ ಹೃದಯದಲ್ಲಿ ನೆಲೆಯಾಗಿದ್ದಾರೆ. ಹೀಗಾಗಿ ಸೋಲನ್ನೇ ಗದರಿಸಿದ ಸೋಲಿಲ್ಲದ ಸರದಾರ ಎಂಬ ಕೀರ್ತಿಗೆ ಪಾತ್ರರಾಗಿದ್ದಾರೆ.

ಈ ಸಂದರ್ಭದಲ್ಲಿ ಅವ್ವ ಸೇವಾ ಟ್ರಸ್ಟ ಸಂಚಾಲಕ ಡಾ.ಬಸವರಾಜ ಧಾರವಾಡ ಮಾತನಾಡಿ ರಂಗಮಂದಿರದ ಮಹತ್ವದ ಕುರಿತು ಹಾಗೂ ಹೊರಟ್ಟಿಯವರ ಅನುದಾನವನ್ನು ವಿವಿಧ ಕ್ಷೇತ್ರಕ್ಕೆ ಸದ್ಬಳಕೆ ಮಾಡಿಕೊಡುವ ಮೂಲಕ ಗದಗ ಜಿಲ್ಲೆಯಲ್ಲಿ ವಿವಿಧ ಶಾಲಾ ಕಾಲೇಜುಗಳಿಗೆ, ಸಮುದಾಯಗಳಿಗೆ ಹೊರಟ್ಟಿಯವರು ಸ್ಪಂದಿಸಿದ ಕುರಿತು ಮಾತನಾಡಿದರು. ಗದಗ ಜಿಲ್ಲೆಯ ಬಗ್ಗೆ ಹೊರಟ್ಟಿಯವರಿಗೆ ವಿಶೇಷ ಕಾಳಜಿ, ಪ್ರೀತಿ ಇರುವುದರಿಂದಾಗಿ ಇಷ್ಟೊಂದು ಕಾಮಗಾರಿಗಳು ಆಗಲು ಸಾಧ್ಯ ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ರಂಗ ಮಂದಿರ ಉದ್ಘಾಟನೆಯನ್ನು

(ಕೊನೆಯ ಪುಟಕ್ಕೆ)....

# ಶಿಕ್ಷಣ ಸಂಸ್ಥೆಗಳ ಗಟ್ಟಿ ಧ್ವನಿಯಾದ ಹೊರಟ್ಟಿಯವರ ಸಾರ್ಥಕ ಸೇವೆಯನ್ನು ಸಮಾಜ ಎಂದೂ ಮರೆಯದು : ಡಾ. ಅನ್ನದಾನೀಶ್ವರ ಶ್ರೀಗಳು

ಮುಂಡರಗಿ, 19. ಖಾಸಗಿ ಹಾಗೂ ಸರಕಾರಿ ಶಿಕ್ಷಣ ಸಂಸ್ಥೆಗಳ ಹಿತಕಾಯುವಲ್ಲಿ ಕಳೆದ 45 ವರ್ಷಗಳಿಂದ ಹತ್ತು ಹಲವು ಹೋರಾಟಗಳನ್ನು ಮಾಡುವ ಮೂಲಕ ಶಿಕ್ಷಣ ಸಂಸ್ಥೆಯವರು ನೆಮ್ಮದಿಯಿಂದ ಕೆಲಸ ಮಾಡುವಂತಹ ವಾತಾವರಣವನ್ನು ಕಲ್ಪಿಸಿಕೊಟ್ಟವರು ಹಾಗೂಶಿಕ್ಷಕರ ವಲಯದಅತ್ಯಂತ ನಂಬುಗೆಯ ಏಕೈಕ ನಾಯಕರೆನಿಸಿಕೊಂಡವರು ಸಭಾಪತಿ ಬಸವರಾಜ ಹೊರಟ್ಟಿಯವರು. ಎಂದು ಮುಂಡರಗಿಯಡಾ.ಅನ್ನದಾನೀಶ್ವರ ಸ್ವಾಮಿಗಳು ಹೇಳಿದರು.

ಅವರುಗೌರವಾನ್ವಿತ ಸಭಾಪತಿ ಬಸವರಾಜ ಹೊರಟ್ಟಿಯವರ ಸ್ಥಳೀಯ ಶಾಸಕರ ಪ್ರದೇಶಾಭಿವೃದ್ಧಿಯೋಜನ 'ಯಅಡಿಯಲ್ಲಿ ನಿರ್ಮಾಣಗೊಂಡ ಶುದ್ಧಕುಡಿಯುವ ನೀರಿನಘಟಕದ ಲೋಕಾರ್ಪಣೆಕಾರ್ಯಕ್ರಮದ ಸಾನಿಧ್ಯವಹಿಸಿ ಮಾತನಾಡಿದಅವರು. ಖಾಸಗಿ ಶಾಲೆಯಲ್ಲಿ5 ಲಕ್ಷರೂಪಾಯಿ ವೆಚ್ಚ ಶುದ್ಧ ನೀರುಘಟಕ ನಿರ್ಮಾಣಕ್ಕೆ ಹೊರಟ್ಟಿಯವರ ಸಹಾಯ ಮಾಡುವ ಮೂಲಕ ವಿದ್ಯಾರ್ಥಿಗಳ ಆರೋಗ್ಯದತ್ತ ಗಮನಹರಿಸಿದ್ದು ವಿಶೇಷ ಹೀಗಾಗಿ ಅವರ ಕಳಕಳಿಯನ್ನು, ಕಾಳಜಿಯನ್ನು ಅತ್ಯಂತ ಪ್ರೀತಿಯಿಂದಗೌರವಿಸುವುದಾಗಿ ಹೇಳಿದರು.ನಮ್ಮ ಸಂಸ್ಥೆಗೆಎಲ್ಲರೀತಿಯ ಸಹಾಯ ಸಹಕಾರ ಮಾಡುವುದರಜೊತೆಗೆನಮ್ಮ ಶಾಲಾ ಕಾಲೇಜುಗಳ ಹಿತವನ್ನುಕಾಯುತ್ತಾ ಬಂದಿದ್ದಾರೆ.ಹೀಗಾಗಿ ಅವರನ್ನು ಶ್ರೀಮಠ ವಿಶೇಷವಾಗಿ ಕಾಣುವುದರಜೊತೆಗೆ ಸದಾ ಶ್ರೀರಕ್ಷೆ ನೀಡುತ್ತಾ ಬಂದಿದೆಎಂದು ಹೇಳಿ ಆಶೀರ್ವಚನ ನೀಡಿದರು.

ಸಭಾಪತಿ ಬಸವರಾಜ ಹೊರಟ್ಟಿಯವರು ಶುದ್ಧಕುಡಿಯುವ ನೀರುಘಟಕ ಲೋಕಾರ್ಪಣೆ ಮಾಡಿ ಮಾತನಾಡಿದಅವರು ನಮಗೆ ಬರುವಎಲ್ಲಅನುದಾನದ ಬಹುಪಾಲನ್ನು ಶಾಲಾ ಕಾಲೇಜುಅಭಿವೃದ್ಧಿಗೆ ನೀಡುತ್ತಾ ಬಂದಿದ್ದೇನೆ. ಗದಗ ಶಹರದಅಂಚಿನಲ್ಲಿರುವ ನರಸಾಪೂರದ ಶಾಲೆಗೆ ಶುದ್ಧ ನೀರುಘಟಕ ಬೇಕಾಗಿ-



ತ್ತು ಈ ಭಾಗದ ವಿದ್ಯಾರ್ಥಿಗಳಿಗೆ ಉತ್ತಮ ನೀರನ್ನುಸೇವಿಸುವ ಮೂಲಕ ಆರೋಗ್ಯ ವೃದ್ಧಿಯಾಗಲು ಈ ಘಟಕ ನೆರವಾಗಲಿದೆ. ವಿಶೇಷವಾಗಿ ಖಾಸಗಿ ಶಾಲೆಗಳು ಇಂದು ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿವೆ. ಈ ಸಮಸ್ಯೆಗಳಿಗೆ ಪರಿಹಾರಉತ್ತಮ ಶಿಕ್ಷಣ ನೀಡುವುದು.ಮಕ್ಕಳ ಬಗ್ಗೆ ವಿಶೇಷ ಕಾಳಜಿ ವಹಿಸುವುದು.ಶಾಲಾ ವಾತವರಣವನ್ನು ಉತ್ಕೃಷ್ಟಗೊಳಿಸಿದಾಗ ಮಾತ್ರ ಸಾಧ್ಯ.ಈ ನಿಟ್ಟಿನತ್ತ ಶಿಕ್ಷಣ ಸಂಸ್ಥೆಯವರು, ಶಿಕ್ಷಕರು ಹೆಚ್ಚು ಗಮನ ಹರಿಸಬೇಕಿದೆಎಂದು ಹೇಳಿದರು.

ಅವ್ವ ಸೇವಾ ಟ್ರಸ್ಟ ಸಂಚಾಲಕ ಡಾ.ಬಸವರಾಜಧಾರವಾಡಮಾತನಾಡಿ ಹೊರಟ್ಟಿಯವರುತಮ್ಮಅನುದಾನವನ್ನು ಮಠ ಮತ್ತು ಮತೀಯರಾಜಕಾರಣಕ್ಕೆ ಬಳಸಿಕೊಳ್ಳದೇ ಎಲ್ಲ ಸಮುದಾಯಗಳಿಗೆ ಸಮಾನವಾಗಿ ಹಂಚಿ ಶಿಕ್ಷಣ ಸಂಸ್ಥೆಗಳ ಅಭಿವೃದ್ಧಿಗೂಕಾರಣೀಕರ್ತರಾಗಿದ್ದಾರೆ. ಗದಗಜಿಲ್ಲೆಗೆಅವರು ನೀಡಿದಅನುದಾನ ಸದ್ಭಳಕೆ ಆಗುವುದರ ಜೊತೆಗೆ ಸಾರ್ಥಕ ಸೇವೆಗೆ ಸಹಾಯವಾಗಿದೆ.ಹೀಗಾಗಿ ಗದಗಜಿಲ್ಲೆಯಜನತೆಯ ಪರವಾಗಿ ಹೊರಟ್ಟಿಯವರನ್ನುಅಭಿನಂದಿಸುವುದಾಗಿ ಹೇಳಿದರು.

ಈ ಸಂದರ್ಭದಲ್ಲಿ ವೀರೇಶ್ವರ ಸ್ವಾಮಿಗಳು, ಡಾ. ಬಿ.ಜಿ. ಜವಳಿ, ಡಿ.ಡಿ.ಪಿ.ಐ. ಜಿ.ಎಂ. ಬಸವಲಿಂಗಪ್ಪ, ಜಿ.ಎಲ್. ಬಾರಾಟಕ್ಕೆ, ವಿ.ವಿ. ನಡುವಿನಮನಿ, ಅನ್ನದಾನಿ ಹಿರೇಮಠ, ಶ್ರೀಮತಿ ಮಹಾದೇವಿ ಮೇಲ್ಮನಿ, ಎಸ್. ಎಂ. ಅಗಡಿ, ಲಕ್ಷ್ಮೀ ಕಾಕಿ, ಸಿದ್ಧಲಿಂಗಪ್ಪ ಪಡೇಸೂರ, ಜಂಬಣ್ಣ ಕಲಬುರ್ಗಿ, ಮುತ್ತನಗೌಡ ಸಣ್ಣಗೌಡ್ರ, ಶಿವಾನಂದ ಕರಿಗೌಡ್ರ, ಶ್ರೀಮತಿ ನಿರ್ಮಲಾ ಕರಿಗೌಡ್ರ, ನಿಂಗಪ್ಪ ಮಣ್ಣೂರ ಉಪಸ್ಥಿತರಿದ್ದರು.

ಮುಖ್ಯೋಪಾಧ್ಯಾಯರಾದ ಎಂ.ಎಚ್. ಪೂಜಾರ ಪ್ರಾಸ್ತಾವಿಕವಾಗಿ ಮಾತನಾಡಿ ಸರ್ವರನ್ನೂ ಸ್ವಾಗತಿಸಿದರು. ಹೊಳಗುಂದಿ ಗುರುಗಳು ಕಾರ್ಯಕ್ರಮ ನಿರೂಪಿಸಿ ವಂದಿಸಿದರು.

# ಸರಕಾರಿ ಶಾಲಾ ಹಂತದಲ್ಲಿಯೇ ಮೊಟ್ಟ ಮೊದಲ ನಿರ್ಮಾಣಗೊಂಡ ರಂಗಮಂದಿರ ಸದುಪಯೋಗವಾಗಲಿ : ಸಭಾಪತಿ ಬಸವರಾಜ ಹೊರಟ್ಟಿ

**ಗದಗ** : ಸರಕಾರಿ ಪ್ರೌಢಶಾಲಾ ಹಂತದಲ್ಲಿ ಮೊಟ್ಟಮೊದಲ ನಿರ್ಮಾಣಗೊಂಡ ರಂಗಮಂದಿರ ಶಾಲಾ ವಾತಾವರಣದ ಕಳೆ ಕಟ್ಟುವುದರ ಜೊತೆಗೆ ವಿದ್ಯಾರ್ಥಿಗಳ ಸರ್ವಾಂಗೀಣ ಅಭಿವೃದ್ಧಿಗೆ ಒಂದು ವೇದಿಕೆ ಆಗಲಿ ಎಂದು ಕರ್ನಾಟಕ ವಿಧಾನ ಪರಿಷತ್ತಿನ ಸಭಾಪತಿ ಬಸವರಾಜ ಹೊರಟ್ಟಿಯವರು ಹೇಳಿದರು.



ಅವರು ತಮ್ಮ ಶಾಸಕರ ಪ್ರದೇಶಾಭಿವೃದ್ಧಿ ಅಡಿಯಲ್ಲಿ ನಿರ್ಮಾಣಗೊಂಡ ರಂಗಮಂದಿರ ಹಾಗೂ ವಿವಿಧ ಅಭಿವೃದ್ಧಿ ಕಾಮಗಾರಿಗಳ ಉದ್ಘಾಟನೆ ಮಾಡಿ ಮಾತನಾಡಿದ ಅವರು ಸರಕಾರಿ ಪ್ರೌಢಶಾಲಾ ಹಂತದಲ್ಲಿ ರಂಗಮಂದಿರ ನಿರ್ಮಾಣ ಮಾಡಿದ್ದು ಒಂದು ಹೊಸ ಆಲೋಚನೆ. ಈ ರಂಗಮಂದಿರದ ಮೂಲಕ ದೈನಂದಿನ ಪ್ರಾರ್ಥನೆ, ಬಿಸಿಯೂಟ ಸವಿಯಲು ನೆರಳು ಹಾಗೂ ವಿವಿಧ ಸಾಂಸ್ಕೃತಿಕ ಚಟುವಟಿಕೆಗಳ ಪ್ರದರ್ಶನಕ್ಕೆ ಒಂದು ಉತ್ತಮವೇದಿಕೆ ಆಗುವಲ್ಲಿ ಯಾವುದೇ ಸಂಶಯವಿಲ್ಲ. ಈ ರಂಗಮಂದಿರದ ಮೂಲಕ ಶಾಲಾ ವಾತಾವರಣದ ಕಳೆಯೇ ಬದಲಾಗಿದೆ. ಇದು ಸರ್ಕಾರಿ ಶಾಲೆಯಾ ಎನ್ನುವಂತಹ ವಾತಾವರಣ ಮೂಡಿದ್ದು ಖುಷಿ ತಂದಿದೆ. ನಾ ನೀಡಿದ ಅನುದಾನ ಸದ್ಬಳಕೆ ಆಗುವಮೂಲಕ ಸಾರ್ಥಕತೆಯಾಗಿದೆ. ಇದರ ಸದುಪಯೋಗ ಹೆಚ್ಚೆಚ್ಚು ಆಗಲೆಂದು ಆಶಯ ವ್ಯಕ್ತಪಡಿಸಿದರು. ಜೊತೆಗೆ ಈ ಶಾಲೆಯ ಸರ್ವಾಂಗೀಣ ಅಭಿವೃದ್ಧಿಗೆ ಎಲ್ಲ ರೀತಿಯ ಸಹಕಾರವನ್ನು ಮುಂದೆಯೂ ಮಾಡುವುದಾಗಿ ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಶಾಸಕ ಎಚ್.ಕೆ.ಪಾಟೀಲರು ಅನ್ನ ಸೇವಾ ಟ್ರಸ್ಟ ನಿರ್ದೇಶಕರಾದ ಶ್ರೀಮತಿ ಹೇಮಲತಾ ಬಸವರಾಜ ಹೊರಟ್ಟಿ ಇವರ ಸಹಕಾರದಿಂದ ನಿರ್ಮಾಣಗೊಳ್ಳುವ ಗಣಿತ ಪ್ರಯೋಗಾಲಯ ಹಾಗೂ ಸಂಶೋಧನಾ ಕೇಂದ್ರದ ಕರಪತ್ರ ಬಿಡುಗಡೆ ಮಾಡಿ ಮಾತನಾಡಿದ ಅವರು ಶ್ರೀಮತಿ ಹೇಮಲತಾ ಬಸವರಾಜ ಹೊರಟ್ಟಿಯವರು ಕೂಡಾ ಬಸವರಾಜ ಹೊರಟ್ಟಿಯವರ ಎಲ್ಲ ಬೆಳವಣಿಗೆಗೆ ಕಾರಣೀಕರ್ತರಾಗಿದ್ದಾರೆ. ಜೊತೆಗೆ ಸಮಾಜಮುಖಿ ಸೇವೆ ಮಾಡುವ ಮೂಲಕ ವಿದ್ಯಾರ್ಥಿಗಳಿಗೆ ಸದುಪಯೋಗವಾಗುವ ಈ ಸಂಶೋಧನಾ ಕೇಂದ್ರ ರಾಜ್ಯದಲ್ಲಿಯೇ ಮಾದರಿಯಾಗಲಿ ಎಂದು ಶುಭ ಹಾರೈಸಿದರು. ಅಲ್ಲದೇ ಶಾಲಾ ಆವರಣದಲ್ಲಿ ಪಿಂಕ್ ಶೌಚಾಲಯ ನಿರ್ಮಾಣಕ್ಕೆ ಎಲ್ಲ ರೀತಿಯ ಸಹಕಾರ ನೀಡುವುದಾಗಿ ಹೇಳಿದರು. ಬಸವರಾಜ ಹೊರಟ್ಟಿಯವರ ನಾಲ್ಕು ದಶಕಗಳ ಸಾಮಾಜಿಕ ಸೇವೆಗಳ ಕುರಿತು ಸಾರ್ವಜನಿಕ ಬದುಕಿನ ಕುರಿತು ಅರ್ಥಪೂರ್ಣವಾಗಿ ಮಾತನಾಡಿ ಹೊರಟ್ಟಿಯವರ ಸೇವೆ ಸಾರ್ಥಕವಾಗಿದೆ. ವಿಶೇಷವಾಗಿ ಗದಗ ಜಿಲ್ಲೆಗೆ ಒಂದು ರಂಗಮಂದಿರವನ್ನು ಕೊಡುವ ಮೂಲಕ ಗದುಗಿನ ಕೀರ್ತಿಯನ್ನು ಹೆಚ್ಚಿಸಿದ್ದಾರೆ. ಅದಕ್ಕಾಗಿ ಅವರಿಗೂ ವಿಶೇಷ ಅಭಿನಂದನೆ ಸಲ್ಲಿಸುವುದಾಗಿ ಹೇಳಿದರು. ತೋಂಟದಾರ್ಯ ಶಾಖಾ ಮಠ ಮುಂಡರಗಿಯ ನಿಜಗುಣಾನಂದ ಸ್ವಾಮೀಗಳು ಸಾನಿಧ್ಯವಹಿಸಿ ಆಶೀರ್ವಚನ ನೀಡಿ ಮಾತನಾಡಿ ಹೊರಟ್ಟಿಯವರು ಒಬ್ಬ ಪ್ರಬುದ್ಧ ಮುತ್ಸದ್ದಿ, ಜನಸೇವಕ, ಅತ್ಯಂತ ವಿಶ್ವಾಸಾರ್ಹ ನಾಯಕರಾಗಿದ್ದರಿಂದಲೇ ಕಳೆದ 45 ವರ್ಷಗಳಿಂದ ಸಾರ್ವಜನಿಕ ಬದುಕಿನಲ್ಲಿ ಕ್ರಿಯಾಶೀಲ ವ್ಯಕ್ತಿಯಾಗಿರುವುದಕ್ಕೆ ಸಾಧ್ಯವಾಗಿದೆ. ಅವರ ಶಾಲೆ ಸ್ಪಂದನೆ ಸಹಕಾರ ಮನೋಭಾವದಿಂದ ನಾಡಿನ ಸಮಸ್ತ ಶಿಕ್ಷಕರ ಹೃದಯದಲ್ಲಿ ನೆಲೆಯಾಗಿದ್ದಾರೆ. ಹೀಗಾಗಿ ಸೋಲನ್ನೇ ಗದರಿಸಿದ ಸೋಲಿಲ್ಲದ ಸರದಾರ ಎಂಬ ಕೀರ್ತಿಗೆ ಪಾತ್ರರಾಗಿದ್ದಾರೆ.

ಈ ಸಂದರ್ಭದಲ್ಲಿ ಅನ್ನ ಸೇವಾ ಟ್ರಸ್ಟ ಸಂಚಾಲಕ ಡಾ.ಬಸವರಾಜ ಧಾರವಾಡ ಮಾತನಾಡಿ ರಂಗಮಂದಿರದ ಮಹತ್ವದ ಕುರಿತು ಹಾಗೂ ಹೊರಟ್ಟಿಯವರ ಅನುದಾನವನ್ನು ವಿವಿಧ ಕ್ಷೇತ್ರಕ್ಕೆ ಸದ್ಬಳಕೆ ಮಾಡಿಕೊಡುವ ಮೂಲಕ ಗದಗ ಜಿಲ್ಲೆಯಲ್ಲಿ ವಿವಿಧ ಶಾಲಾ ಕಾಲೇಜುಗಳಿಗೆ, ಸಮುದಾಯಗಳಿಗೆ ಹೊರಟ್ಟಿಯವರು ಸ್ಪಂದಿಸಿದ ಕುರಿತು ಮಾತನಾಡಿದರು. ಗದಗ ಜಿಲ್ಲೆಯ ಬಗ್ಗೆ ಹೊರಟ್ಟಿಯವರಿಗೆ ವಿಶೇಷ ಕಾಳಜಿ, ಪ್ರೀತಿ ಇರುವುದರಿಂದಾಗಿ ಇಷ್ಟೊಂದು ಕಾಮಗಾರಿಗಳು ಆಗಲು ಸಾಧ್ಯ ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ರಂಗಮಂದಿರ ಉದ್ಘಾಟನೆ, ಶ್ರೀಮತಿ ಹೇಮಲತಾ ಬಸವರಾಜ ಹೊರಟ್ಟಿ ಗಣಿತ ಪ್ರಯೋಗಾಲಯ ಹಾಗೂ ಸಂಶೋಧನಾ ಕೇಂದ್ರಕ್ಕೆ ಚಾಲನೆ, ವಿಕಲಚೇತನರಿಗೆ ತ್ರಿಚಕ್ರವಾಹನ ವಿತರಣೆ, ಹೊರಟ್ಟಿಯವರು 8 ಬಾರಿ ಆಯ್ಕೆಯಾದ ನೆನಪಿಗಾಗಿ 8 ವಿಶೇಷ ಗಿಡಗಳನ್ನು ನೆಡುವ ಕಾರ್ಯಕ್ರಮ, ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಲ್ಯಾಪಟಾಪ್ ವಿತರಣೆ, ಮತ್ತು ಪಿಂಕ್ ಶೌಚಾಲಯಕ್ಕೆ ಶಂಕು ಸ್ಥಾಪನೆಯಂತಹ ಹಲವಾರು ವಿಧಾಯಕ ಕಾರ್ಯಕ್ರಮಗಳಿಗೆ ಚಾಲನೆ ನೀಡಲಾಯಿತು.

ಈ ಸಂದರ್ಭದಲ್ಲಿ ನಗರಸಭೆ ಅಧ್ಯಕ್ಷೆ ಉಷಾ ದಾಸರ, ನಗರಸಭೆ ಸದಸ್ಯೆ ವಿದ್ಯಾವತಿ ಗಡಗಿ, ಕೃಷ್ಣಾ ಪರಾಪೂರ, ಅನೀಲ ಗರಗ, ರೇಣುಕಾ ರೋಣದ, ಡಿ.ಡಿ.ಪಿ.ಐ. ಜಿ.ಎಂ. ಬಸಲಿಂಗಪ್ಪ, ಜಿ.ಎಲ್.ಬಾರಾಟಕ್ಕೆ, ಬಿ.ಪಿ.ನಡಾವಿನಮನಿ, ಎಸ್.ಎಂ.ಅಗಡಿ, ಎಸ್.ಎಸ್.ಗಡ್ಡದ, ಬಸವರಾಜ ಸುರಗೊಂಡ, ಬಿ.ಇ.ಓ. ಜಯಶ್ರೀ ಪರೂರ ಮುಂತಾದವರು ಉಪಸ್ಥಿತರಿದ್ದರು. ಮುಖ್ಯೋಪಾಧ್ಯಾಯ ಎಸ್.ಎಸ್. ಮುಳಗುಂದಮಠ ಸ್ವಾಗತಿಸಿದರು. ಕಾರ್ಯಕ್ರಮ ನಿರೂಪಣೆಯನ್ನು ಶ್ರೀಮತಿ ಎಸ್.ಜಿ.ಕುಲಗುಡಿ, ಶ್ರೀಮತಿ ಶಾರದಾ ಬಾಣದ ನೆರವೇರಿಸಿದರು. ಕೊನೆಗೆ ಜಯಲಕ್ಷ್ಮಿ ಅಗ್ಗೇರಿ ವಂದಿಸಿದರು.

# ಶಿಕ್ಷಣ ಸಂಸ್ಥೆಗಳ ಗಟ್ಟಿಧ್ವನಿಯಾದ ಹೊರಟ್ಟಿಯವರ ಸಾರ್ಥಕ ಸೇವೆಯನ್ನು ಸಮಾಜ ಎಂದೂ ಮರೆಯದು



ಗದಗ, ಮಾ. 19. ಖಾಸಗಿ ಹಾಗೂ ಸರಕಾರಿ ಶಿಕ್ಷಣ ಸಂಸ್ಥೆಗಳ ಹಿತಕಾಯುವಲ್ಲಿ ಕಳೆದ 45 ವರ್ಷಗಳಿಂದ ಹತ್ತು ಹಲವು ಹೋರಾಟಗಳನ್ನು ಮಾಡುವ ಮೂಲಕ ಶಿಕ್ಷಣ ಸಂಸ್ಥೆಯವರು ನೆಮ್ಮದಿಯಿಂದ ಕೆಲಸ ಮಾಡುವಂತಹ ವಾತಾವರಣವನು ಕಲ್ಪಿಸಿಕೊಟ್ಟವರು ಹಾಗೂ ಶಿಕ್ಷಕರ ವಲಯದ ಅತ್ಯಂತ ನಂಬುಗೆಯ ಏಕೈಕ ನಾಯಕರೆನಿಸಿಕೊಂಡವರು ಸಭಾಪತಿ ಬಸವರಾಜ ಹೊರಟ್ಟಿಯವರು ಎಂದು ಮುಂಡರಗಿಯ ಡಾ.ಅನ್ನದಾನೀಶ್ವರ ಸ್ವಾಮೀಜಿ ಹೇಳಿದರು.

ಅವರು ಸಭಾಪತಿಗಳಾದ ಬಸವರಾಜ ಹೊರಟ್ಟಿಯವರ ಸ್ಥಳೀಯ ಶಾಸಕರ ಪ್ರದೇಶಾಭಿವೃದ್ಧಿ ಯೋಜನೆಯ ಅಡಿಯಲ್ಲಿ ನರಸಾಪೂರದ ಅನ್ನದಾನೀಶ್ವರ ಶಾಲೆಯಲ್ಲಿ ನಿರ್ಮಾಣಗೊಂಡ ಶುದ್ಧ ಕುಡಿಯುವ ನೀರಿನ ಘಟಕದ ಲೋಕಾರ್ಪಣೆ ಕಾರ್ಯಕ್ರಮದ ಸಾನಿಧ್ಯವಹಿಸಿ ಮಾತನಾಡಿದರು.

ಖಾಸಗಿ ಶಾಲೆಯಲ್ಲಿ 5 ಲಕ್ಷ ರೂಪಾಯಿ ವೆಚ್ಚ ಶುದ್ಧ ನೀರು ಘಟಕ ನಿರ್ಮಾಣಕ್ಕೆ ಹೊರಟ್ಟಿಯವರ ಸಹಾಯ ಮಾಡುವ ಮೂಲಕ ವಿದ್ಯಾರ್ಥಿಗಳ ಆರೋಗ್ಯದತ್ತ ಗಮನಹರಿಸಿದ್ದು ವಿಶೇಷ ಹೀಗಾಗಿ ಅವರ ಕಳಕಳಿಯನ್ನು, ಕಾಳಜಿಯನ್ನು ಅತ್ಯಂತ ಪ್ರೀತಿಯಿಂದ ಗೌರವಿಸುವುದಾಗಿ ಹೇಳಿದರು.

ನಮ್ಮ ಸಂಸ್ಥೆಗೆ ಎಲ್ಲ ರೀತಿಯ ಸಹಾಯ ಸಹಕಾರ ಮಾಡುವುದರ ಜೊತೆಗೆ ನಮ್ಮ ಶಾಲಾ ಕಾಲೇಜುಗಳ ಹಿತವನ್ನು ಕಾಯುತ್ತಾ ಬಂದಿದ್ದಾರೆ. ಹೀಗಾಗಿ ಅವರನ್ನು ಶ್ರೀಮಠ ವಿಶೇಷವಾಗಿ ಕಾಣುವುದರ ಜೊತೆಗೆ ಸದಾ ಶ್ರೀರಕ್ಷೆ ನೀಡುತ್ತಾ ಬಂದಿದೆ ಎಂದು ಹೇಳಿದರು.

ಸಭಾಪತಿ ಬಸವರಾಜ ಹೊರಟ್ಟಿಯವರು ಶುದ್ಧ ಕುಡಿಯುವ ನೀರು ಘಟಕ ಲೋಕಾರ್ಪಣೆ ಮಾಡಿ ಮಾತನಾಡಿ, ನಮಗೆ ಬರುವ ಎಲ್ಲ ಅನುದಾನದ ಬಹುಪಾಲನ್ನು ಶಾಲಾ ಕಾಲೇಜು ಅಭಿವೃದ್ಧಿಗೆ ನೀಡುತ್ತಾ ಬಂದಿದ್ದೇನೆ. ಗದಗ ಶಹರದ ಅಂಚಿನಲ್ಲಿರುವ ನರಸಾಪೂರದ ಶಾಲೆಗೆ ಶುದ್ಧ ನೀರು ಘಟಕ ಬೇಕಾಗಿತ್ತು ಈ ಭಾಗದ ವಿದ್ಯಾರ್ಥಿಗಳಿಗೆ ಉತ್ತಮ ನೀರನ್ನು ಸೇವಿಸುವ ಮೂಲಕ ಆರೋಗ್ಯ ವೃದ್ಧಿಯಾಗಲು ಈ ಘಟಕ ನೆರವಾಗಲಿದೆ. ವಿಶೇಷವಾಗಿ ಖಾಸಗಿ ಶಾಲೆಗಳು ಇಂದು ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿವೆ. ಈ ಸಮಸ್ಯೆಗಳಿಗೆ ಪರಿಹಾರ ಉತ್ತಮ ಶಿಕ್ಷಣ ನೀಡುವುದು. ಮಕ್ಕಳ ಬಗ್ಗೆ ವಿಶೇಷ ಕಾಳಜಿ ವಹಿಸುವುದು. ಶಾಲಾ ವಾತವರಣವನ್ನು ಉತ್ಕೃಷ್ಟಗೊಳಿಸಿದಾಗ ಮಾತ್ರ ಸಾಧ್ಯ. ಈ ನಿಟ್ಟಿನತ್ತ ಶಿಕ್ಷಣ ಸಂಸ್ಥೆಯವರು, ಶಿಕ್ಷಕರು ಹೆಚ್ಚು ಗಮನ ಹರಿಸಬೇಕಿದೆ ಎಂದು ಹೇಳಿದರು.

ಅವ್ವ ಸೇವಾ ಟ್ರಸ್ಟ ಸಂಚಾಲಕರಾದ ಡಾ.ಬಸವರಾಜ ಧಾರವಾಡ ಮಾತನಾಡಿ, ಹೊರಟ್ಟಿಯವರು ತಮ್ಮ ಅನುದಾನವನ್ನು ಮತ ಮತ್ತು ಮತೀಯ ರಾಜಕಾರಣಕ್ಕೆ ಬಳಸಿಕೊಳ್ಳದೇ ಎಲ್ಲ ಸಮುದಾಯಗಳಿಗೆ ಸಮಾನವಾಗಿ ಹಂಚಿ ಶಿಕ್ಷಣ ಸಂಸ್ಥೆಗಳ ಅಭಿವೃದ್ಧಿಗೂ ಕಾರಣೀಕರ್ತರಾಗಿದ್ದಾರೆ. ಗದಗ ಜಿಲ್ಲೆಗೆ ಅವರು ನೀಡಿದ ಅನುದಾನ ಸದ್ಬಳಕೆ ಆಗುವುದರ ಜೊತೆಗೆ ಸಾರ್ಥಕ ಸೇವೆಗೆ ಸಹಾಯವಾಗಿದೆ. ಹೀಗಾಗಿ ಗದಗ ಜಿಲ್ಲೆಯ ಜನತೆಯ ಪರವಾಗಿ ಹೊರಟ್ಟಿಯವರನ್ನು ಅಭಿನಂದಿಸುವುದಾಗಿ ಹೇಳಿದರು.

ಈ ಸಂದರ್ಭದಲ್ಲಿ ವೀರೇಶ್ವರ ಸ್ವಾಮಿಗಳು, ಡಾ.ಬಿ.ಜಿ.ಜವಳಿ, ಡಿ.ಡಿ.ಪಿ.ಐ. ಜಿ.ಎಂ.ಬಸವಲಿಂಗಪ್ಪ, ಜಿ.ಎಲ್.ಬಾರಾಟಕ್ಕೆ, ವಿ.ವಿ.ನಡುವಿನಮನಿ, ಅನ್ನದಾನಿ ಹಿರೇಮಠ, ಶ್ರೀಮತಿ ಮಹಾದೇವಿ ಮೇಲ್ಗಡಿ, ಎಸ್.ಎಂ.ಅಗಡಿ, ಲಕ್ಷ್ಮೀ ಕಾಕಿ, ಸಿದ್ದಲಿಂಗಪ್ಪ ಪಡೇಸೂರ, ಜಂಬಣ್ಣ ಕಲಬುರ್ಗಿ, ಮುತ್ತನಗೌಡ ಸಣ್ಣಗೌಡ್ರ, ಶಿವಾನಂದ ಕರಿಗೌಡ್ರ, ಶ್ರೀಮತಿ ನಿರ್ಮಲಾಕರಿಗೌಡ್ರ, ನಿಂಗಪ್ಪ ಮಣ್ಣೂರ ಉಪಸ್ಥಿತರಿದ್ದರು. ಮುಖ್ಯೋಪಾಧ್ಯಾಯರಾದ ಎಂ.ಎಚ್.ಪೂಜಾರ ಪ್ರಾಸ್ತಾವಿಕವಾಗಿ ಮಾತನಾಡಿ ಸರ್ವರನ್ನೂ ಸ್ವಾಗತಿಸಿದರು. ತೋಳಗುಂದಿ ಗುರುಗಳು ಕಾರ್ಯಕ್ರಮ ನಿರೂಪಿಸಿ ವಂದಿಸಿದರು.